ಶ್ರೀ ವಾಟಾಳ್ ನಾಗರಾಜ್: ಹಾಗಾದರೆ, ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಎಲ್ಲಾ ಆಗಿದೆ. ಅವರು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ಅದಕ್ಕೆ ಅವಕಾಶ ಕೊಡುವುದಿಲ್ಲ. ಇದು ಮುಕ್ತಾಯವಾಗಿದೆ. ಪ್ರಶ್ನೋತ್ತರ ವೇಳೆ ಆರಂಭವಾಗಿದೆ. ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಪ್ರಶ್ನೆ ಕೇಳಬೇಕು.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ವಿಷಯ ಮುಗಿಸಿದ್ದೀರಿ. ಪ್ರಶ್ನೋತ್ತರ ಶುರುವಾಗಬೇಕು. ಯಾರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅವರಿಗೆ ಇವರು ನೋಟೀಸ್ ಕೊಡಬಾರದೇ ಒಂದು ವೇಳೆ, ಅವರು ಹೇಳಿದ್ದರೆ, ಕಾನೂನು ಪ್ರಕಾರ ನೋಟೀಸ್ ಕೊಡಲಿ...

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಧರಣಿಗೆಂದು ಸದನದ ಬಾವಿಗೆ ತೆರಳಿದರು)

(ಗೊಂದಲ)

ಅಧ್ಯಕ್ಷರು: ಈಗ ಪ್ರತಿಯೊಂದಕ್ಕೂ ತಾವುಗಳು ಒಂದು ನಿಂತುಕೊಂಡರೆ ಸಾಧ್ಯವಾಗುವುದಿಲ್ಲ. ಅವರು ವಿವರಣೆ ಕೊಟ್ಟಿದ್ದಾರೆ. ನೀವು ಮುಖ್ಯಮಂತ್ರಿಗಳು ಬಂದು ಹೇಳಬೇಕು ಎಂದು ಹೇಳಿದಿರಿ ಅದೇ ಪ್ರಕಾರ ಅವರು ಬಂದು ಎಲ್ಲಾ ವಿವರಣೆಯನ್ನು ಕೊಟ್ಟರು, ಅದನ್ನು ನೀವು ಪರಿಗಣಿಸದೇ ಪ್ರತಿಯೊಂದಕ್ಕೂ ನೀವು ಈ ರೀತಿ ಬಾವಿಯಲ್ಲಿ ಬಂದು ನಿಂತರೆ ಇದು ಸಂಪ್ರದಾಯವಲ್ಲ, ನಾನು ಎಲ್ಲಾ ಮಾನ್ಯ ವಿರೋಧ ಪಕ್ಷದ ಸ್ನೇಹಿತರಿಗೆ ಹೇಳುವುದೇನೆಂದರೆ, ತಾವು ಇದರಿಂದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿದ ಹಾಗೆ ಆಗುವುದಿಲ್ಲ. ಈ ಮನೆಯ ಗೌರವ ಎತ್ತಕ್ಕೆ ಏರುವುದಿಲ್ಲ. ಆದುದರಿಂದ ದಯಮಾಡಿ ಇಲ್ಲಿ ಕೇಳಿ... ನೀವು ಹೇಳಿದ್ದರಿಂದ ಅವರು ವಿವರಣೆ ಕೊಟ್ಟರು ಅಲ್ಲವೇ? ಹೀಗೇಕೆ ಮಾಡುತ್ತೀರಿ? ಈ ಮನೆಯ ಗೌರವವನ್ನು ನೀವು ಎತ್ತಿ ಹಿಡಿಯುತ್ತಿಲ್ಲ. ಪ್ರತಿಯೊಂದಕ್ಕೂ ನೀವು ಈವರೆಗೆ ಬರುವ ಸಂಪ್ರದಾಯ ಏನೀದೆ ಇದು ಬಹಳ ಕೆಟ್ಟ ಸಂಪ್ರದಾಯ. ನೀವು ಈ ಮನೆಯ ಗೌರವವನ್ನು ಎತ್ತಿ ಹಿಡಿಯುತ್ತಿಲ್ಲ...

(ಗೊಂದಲ)